**All India Radio: Bangalore**
**National Bulletin In Kannada**
**18.11.2025  07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

**ಮುಖ್ಯಾಂಶಗಳು**

**೧. ಅಭಿವೃದ್ಧಿ ಹೊಂದಿದ ಮತ್ತು ಸ್ವಾವಲಂಬಿ ರಾಷ್ಟ್ರವಾಗಲು ಭಾರತ ಉತ್ಸುಕ - ಪ್ರಧಾನಿ ನರೇಂದ್ರ ಮೋದಿ**

**೨. ಬಿಹಾರದಲ್ಲಿ ಹೊಸ ಸರ್ಕಾರ ರಚನೆಗೆ ಬಿರುಸಿನ ರಾಜಕೀಯ ಚಟುವಟಿಕೆ; ಇಂದು ಪಾಟ್ನಾದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ**

**೩. ದೆಹಲಿ ಕಾರು ಸ್ಫೋಟ ಪ್ರಕರಣ; ಎನ್‌ಐಎ ಯಿಂದ ಪ್ರಮುಖ ಆರೋಪಿಯ ಮತ್ತೊಬ್ಬ ಸಹಚರನ ಬಂಧನ**

**೪. ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಶಿಪ್; ಭಾರತದ ಗುರುಪ್ರೀತ್ ಸಿಂಗ್‌ಗೆ ಬೆಳ್ಳಿ ಪದಕ**

**<><><><>**

**ಭಾರತ ಅಭಿವೃದ್ಧಿ ಹೊಂದಿದ ಮತ್ತು ಸ್ವಾವಲಂಬಿಯಾಗಲು ಉತ್ಸುಕವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿ ಆರನೇ ರಾಮನಾಥ್ ಗೋಯೆಂಕಾ ಉಪನ್ಯಾಸದಲ್ಲಿ ಮಾತನಾಡಿದ ಅವರು, ೨೧ನೇ ಶತಮಾನದ ಕಳೆದ ೨೫ ವರ್ಷಗಳು ಶರವೇಗದಲ್ಲಿ ಕಳೆದಿದ್ದು, ಎದುರಾಗಿರುವ ಸವಾಲುಗಳ ನಡುವೆ ಭಾರತದ ವೇಗವನ್ನು ತಡೆಯಲು ಸಾಧ್ಯವಿಲ್ಲ ಎಂದು ಹೇಳಿದರು. ಜಾಗತಿಕ ಸವಾಲುಗಳ ಹೊರತಾಗಿಯೂ, ಭಾರತದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ ಎಂದು ಅವರು ಹೇಳಿದರು. ಭಾರತ, ರೋಮಾಂಚಕ ಭವಿಷ್ಯದತ್ತ ಸಾಗುತ್ತಿದೆ. ಕೇವಲ ಉದಯೋನ್ಮುಖ ಮಾರುಕಟ್ಟೆಯಾಗದೇ, ಉದಯೋನ್ಮುಖ ಮಾದರಿಯೂ ಆಗಿದೆ. ಇಂದು, ಜಗತ್ತು ಭಾರತೀಯ ಬೆಳವಣಿಗೆಯ ಮಾದರಿಯನ್ನು ಭರವಸೆಯ ಮಾದರಿಯಾಗಿ ನೋಡುತ್ತದೆ ಎಂದು ಅವರು ಹೇಳಿದರು.**

**ಧ್ವನಿ: ಪಿಎಂ- ಎಮರ್ಜಿಂಗ್ (೧೯ ಸೆಕೆಂಡ್ಸ್)**

ಇತ್ತೀಚಿನ ಬಿಹಾರ ವಿಧಾನಸಭಾ ಚುನಾವಣೆಗಳನ್ನು ಉಲ್ಲೇಖಿಸಿದ ಅವರು, ೧೯೫೧ ರಿಂದೀಚೆಗೆ ರಾಜ್ಯ ಅತ್ಯಧಿಕ ಮತದಾನವನ್ನು ದಾಖಲಿಸಿದೆ. ಬಿಹಾರದ ಫಲಿತಾಂಶ ಜನರು ಯಾವ ರೀತಿಯ ಸರ್ಕಾರವನ್ನು ಬಯಸುತ್ತಾರೆ ಎಂಬುದನ್ನು ತೋರಿಸುತ್ತದೆ ಎಂದು ಪ್ರಧಾನಿ ಹೇಳಿದರು.

ಧ್ವನಿ: ಪಿಎಂ-ಬಿಹಾರ್ (೩೧ ಸೆಕೆಂಡ್ಸ್)

ಕೇಂದ್ರ ಸರ್ಕಾರವಾಗಲಿ ಅಥವಾ ವಿವಿಧ ಪಕ್ಷಗಳ ನೇತೃತ್ವದ ರಾಜ್ಯ ಸರ್ಕಾರಗಳಾಗಲಿ, ಅವುಗಳ ಪ್ರಾಥಮಿಕ ಗಮನ ಅಭಿವೃದ್ಧಿಯ ಮೇಲೆ ಇರಬೇಕು ಎಂದ ಪ್ರಧಾನಿ ಹೂಡಿಕೆಗಳನ್ನು ಆಕರ್ಷಿಸುವ ಮತ್ತು ಬೆಳವಣಿಗೆಯನ್ನು ಉತ್ತೇಜಿಸುವ ಮೂಲಕ ಆರೋಗ್ಯಕರ ಸ್ಪರ್ಧೆಯ ಮನೋಭಾವವನ್ನು ಬೆಳೆಸಲು ರಾಜ್ಯ ಸರ್ಕಾರಗಳನ್ನು ಇದೇ ವೇಳೆ ಪ್ರೋತ್ಸಾಹಿಸಿದರು.

<><><><>

ಬಿಹಾರದಲ್ಲಿ, ಹೊಸದಾಗಿ ಆಯ್ಕೆಯಾದ ಬಿಜೆಪಿ ಶಾಸಕರು ಇಂದು ಪಾಟ್ನಾದಲ್ಲಿ ತಮ್ಮ ನಾಯಕನನ್ನು ಆಯ್ಕೆ ಮಾಡಲು ಸಭೆ ಸೇರಲಿದ್ದಾರೆ. ಇತ್ತೀಚಿನ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ೮೯ ಸ್ಥಾನಗಳನ್ನು ಗೆದ್ದಿದೆ. ಪಕ್ಷದ ವೀಕ್ಷಕರು ಸಹ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಬಿಹಾರ ಬಿಜೆಪಿ ಅಧ್ಯಕ್ಷ ದಿಲೀಪ್ ಜೈಸ್ವಾಲ್ ತಿಳಿಸಿದ್ದಾರೆ. ಜೆಡಿಯು ಶಾಸಕಾಂಗ ಪಕ್ಷ, ತನ್ನ ನಾಯಕನನ್ನು ಆಯ್ಕೆ ಮಾಡಲು ನಾಳೆ ಪಾಟ್ನಾದಲ್ಲಿ ಸಭೆ ಸೇರುವ ಸಾಧ್ಯತೆಯಿದೆ. ಹೊಸದಾಗಿ ಆಯ್ಕೆಯಾದ ಜೆಡಿಯು ಶಾಸಕರು ನಿನ್ನೆ ಸಭೆ ಸೇರಬೇಕಿತ್ತು ಆದರೆ ಯಾವುದೇ ಕಾರಣವನ್ನು ಉಲ್ಲೇಖಿಸದೆ ಸಭೆಯನ್ನು ಮುಂದೂಡಲಾಯಿತು. ಜೆಡಿಯು ಶಾಸಕಾಂಗ ಪಕ್ಷದ ಸಭೆಯನ್ನು ಮರುನಿಗದಿಪಡಿಸಿದ ನಂತರ, ಇಂದು ನಿಗದಿಯಾಗಿರುವ ಎನ್‌ಡಿಎ ಶಾಸಕಾಂಗ ಪಕ್ಷದ ಸಭೆಯನ್ನು ಸಹ ಮುಂದೂಡಲಾಗುವ ಸಾಧ್ಯತೆಯಿದೆ. ಎನ್‌ಡಿಎಯ ಚುನಾಯಿತ ಮಿತ್ರ ಪಕ್ಷಗಳು ತಮ್ಮ ನಾಯಕನನ್ನು ಆಯ್ಕೆ ಮಾಡಲು ತನ್ನ ಶಾಸಕಾಂಗ ಪಕ್ಷದ ಸಭೆಯನ್ನು ನಡೆಸಲಿದ್ದು, ನಂತರ ಎನ್‌ಡಿಎ ಶಾಸಕಾಂಗ ಪಕ್ಷದ ಜಂಟಿ ಸಭೆ ನಡೆಯಲಿದೆ. ಹೊಸ ಸಚಿವ ಸಂಪುಟದ ಪ್ರಮಾಣವಚನ ಸಮಾರಂಭ ನಾಡಿದ್ದು, ಇದೇ ೨೦ ರಂದು ಪಾಟ್ನಾದ ಗಾಂಧಿ ಮೈದಾನದಲ್ಲಿ ನಡೆಯಲಿದೆ.

<><><><>

ದೆಹಲಿಯ ಕೆಂಪು ಕೋಟೆಯ ಬಳಿ ಸಂಭವಿಸಿದ ಕಾರು ಸ್ಫೋಟ ಪ್ರಕರಣದಲ್ಲಿ ಭಾಗಿಯಾಗಿರುವ ಭಯೋತ್ಪಾದಕನ ಮತ್ತೊಬ್ಬ ಪ್ರಮುಖ ಸಹಚರನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ- ಎನ್‌ಐಎ ಬಂಧಿಸಿದೆ.

ಕಾಶ್ಮೀರಿ ನಿವಾಸಿ ಜಾಸಿರ್ ಬಿಲಾಲ್ ವಾನಿಯನ್ನು ಶ್ರೀನಗರದಿಂದ ಬಂಧಿಸಲಾಗಿದೆ. ವಾನಿ ಭಯೋತ್ಪಾದಕ ದಾಳಿಯನ್ನು ನಡೆಸಲು ತಾಂತ್ರಿಕ ಬೆಂಬಲವನ್ನು ನೀಡಿದ್ದಾನೆ ಎಂದು ಆರೋಪಿಸಲಾಗಿದೆ. ೧೦ ಅಮಾಯಕರ ಜೀವಹಾನಿಗೆ ಮತ್ತು ಸುಮಾರು ೨೫ ಜನರು ಗಾಯಗೊಳ್ಳಲು ಕಾರಣವಾದ ಸ್ಫೋಟಕ್ಕೂ ಮುನ್ನ ವಾನಿ ಡ್ರೋನ್‌ಗಳನ್ನು ಮಾರ್ಪಡಿಸಿ ರಾಕೆಟ್‌ಗಳನ್ನು ತಯಾರಿಸಲು ಪ್ರಯತ್ನಿಸಿದ್ದಾನೆ ಎಂದು ಎನ್‌ಐಎ ಬಹಿರಂಗಪಡಿಸಿದೆ. ಜಾಸಿರ್ ವಾನಿ, ದಾಳಿಯ ಸಕ್ರಿಯ ಸಹ-ಸಂಚುಕೋರನಾಗಿದ್ದು, ಭಯೋತ್ಪಾದಕ ಹತ್ಯಾಕಾಂಡವನ್ನು ಯೋಜಿಸಲು ಭಯೋತ್ಪಾದಕ ಉಮರ್ ನಬಿಯೊಂದಿಗೆ ನಿಕಟವಾಗಿ ಕೆಲಸ ಮಾಡಿದ್ದಾನೆ. ಬಾಂಬ್ ಸ್ಫೋಟದ ಹಿಂದಿನ ಪಿತೂರಿಯನ್ನು ಬಯಲಿಗೆಳೆಯಲು ವಿವಿಧ ಆಯಾಮಗಳನ್ನು ಅನ್ವೇಷಿಸುತ್ತಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ. ಭಯೋತ್ಪಾದನಾ ನಿಗ್ರಹ ಸಂಸ್ಥೆಯ ಹಲವು ತಂಡಗಳು ವವಿಧ ಸುಳಿವುಗಳನ್ನು ಅನುಸರಿಸುತ್ತಿದ್ದು, ಭಯೋತ್ಪಾದಕ ದಾಳಿಯಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಗುರುತಿಸಲು ವಿವಿಧ ರಾಜ್ಯಗಳಲ್ಲಿ ಶೋಧ ನಡೆಸುತ್ತಿವೆ.

<><><>

ಚುನಾವಣಾ ಆಯೋಗ ಅಸ್ಸಾಂನಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಗೆ ಆದೇಶಿಸಿದೆ, ಜನವರಿ ೧, ೨೦೨೬ ಅನ್ನು ಅರ್ಹತಾ ದಿನಾಂಕವಾಗಿ ಇರಿಸಲಾಗಿದೆ. ಅಸ್ಸಾಂನ ಮುಖ್ಯ ಚುನಾವಣಾ ಅಧಿಕಾರಿಗೆ ಬರೆದ ಪತ್ರದಲ್ಲಿ, ಆಯೋಗ, ಸಮಗ್ರ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸುವ ದಿನಾಂಕ ಮುಂದಿನ ತಿಂಗಳು ೨೭ ಆಗಿರುತ್ತದೆ ಎಂದು ತಿಳಿಸಿದೆ. ಹಕ್ಕುಗಳು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿ ಡಿಸೆಂಬರ್ ೨೭ ರಿಂದ ೨೦೨೬ ರ ಜನವರಿ ೨೨ ರ ನಡುವೆ ಇರುತ್ತದೆ. ೨೦೨೬ರ ಫೆಬ್ರವರಿ ೧೦ ಮತದಾರರ ಪಟ್ಟಿಯ ಅಂತಿಮ ಪ್ರಕಟಣೆಯ ದಿನವಾಗಿದೆ. ಪ್ರತಿ ವಿಧಾನಸಭಾ ಕ್ಷೇತ್ರದ ಚುನಾವಣಾ ನೋಂದಣಿ ಅಧಿಕಾರಿಯು ಯಾವುದೇ ಅರ್ಹ ನಾಗರಿಕನನ್ನು ಹೊರಗಿಡದಂತೆ ಮತ್ತು ಅದೇ ಸಮಯದಲ್ಲಿ ಯಾವುದೇ ಅನರ್ಹ ವ್ಯಕ್ತಿಯನ್ನು ಮತದಾರರ ಪಟ್ಟಿಯಲ್ಲಿ ಸೇರಿಸದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ ಎಂದು ಆಯೋಗ ತಿಳಿಸಿದೆ. ವಿಶೇಷ ಪರಿಷ್ಕರಣೆಯ ಸಮಯದಲ್ಲಿ, ಮುಖ್ಯ ಚುನಾವಣಾ ಅಧಿಕಾರಿ ಮತ್ತು ಜಿಲ್ಲಾ ಚುನಾವಣಾ ಅಧಿಕಾರಿ ಪ್ರತಿಯೊಬ್ಬ ಅರ್ಹ ವ್ಯಕ್ತಿಯನ್ನು ಮತದಾರರಾಗಿ ದಾಖಲಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳುತ್ತಾರೆ.

<><><>

ಭಾರತದ ಒಟ್ಟು ರಫ್ತು, ಸರಕು ಮತ್ತು ಸೇವೆಗಳನ್ನು ಒಟ್ಟುಗೂಡಿಸಿ, ೪೯೧.೮ ಬಿಲಿಯನ್ ಯುಎಸ್ ಡಾಲರ್‌ಗಳಿಗೆ ತಲುಪಿದೆ. ಕಳೆದ ಹಣಕಾಸು ವ?ದ ಇದೇ ಅವಧಿಗೆ ಹೋಲಿಸಿದರೆ, ಏಪ್ರಿಲ್ ನಿಂದ ಅಕ್ಟೋಬರ್ ಅವಧಿಯಲ್ಲಿ  ಶೇಕಡ ೪.೮ ಕ್ಕಿಂತ ಹೆಚ್ಚಿನ ಏರಿಕೆ ದಾಖಲಿಸಿದೆ. ವಾಣಿಜ್ಯ ಸಚಿವಾಲಯ ಬಿಡುಗಡೆ ಮಾಡಿದ ತಾತ್ಕಾಲಿಕ ಮಾಹಿತಿಯ ಪ್ರಕಾರ, ಸರಕು ರಫ್ತು ಶೇಕಡ ೦.೬೨ ರ? ಹೆಚ್ಚಳವಾಗಿದ್ದರೆ, ಆಮದು ಶೇಕಡ ೬.೩೭ ರ? ಹೆಚ್ಚಾಗಿದೆ.

**<><><><>**

ಈಜಿಪ್ಟ್ ಕೈರೋದಲ್ಲಿ ನಡೆದ ISSಈ ರೈಫಲ್ ಮತ್ತು ಪಿಸ್ತೂಲ್ ವಿಶ್ವ ಶೂಟಿಂಗ್ ಚಾಂಪಿಯನ್‌ಶಿಪ್‌ನ ಪುರುಷರ ೨೫ ಮೀಟರ್ ಸೆಂಟರ್ ಪಿಸ್ತೂಲ್ ಫೈರ್ ಸ್ಪರ್ಧೆಯಲ್ಲಿ ಒಲಿಂಪಿಕ್ ಪಟು ಭಾರತದ ಗುರುಪ್ರೀತ್ ಸಿಂಗ್ ಬೆಳ್ಳಿ ಪದಕ ಗೆದ್ದಿದ್ದಾರೆ.  ಗುರ್‌ಪ್ರೀತ್ ಉಕ್ರೇನ್‌ನ ಪಾವ್ಲೊ ಕೊರೊಸ್ಟಿಲೋವ್ ವಿರುದ್ಧ ಸೋತು ಬೆಳ್ಳಿಗೆ ತೃಪ್ತಿಪಟ್ಟರು. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಗುರ್‌ಪ್ರೀತ್ ಅವರ ಎರಡನೇ ವೈಯಕ್ತಿಕ ಪದಕ ಇದಾಗಿದ್ದು, ೨೦೧೮ ರಲ್ಲಿ ಚಾಂಗ್‌ವಾನ್‌ನಲ್ಲಿ ನಡೆದ ೨೫ ಮೀಟರ್ ಸ್ಟ್ಯಾಂಡರ್ಡ್ ಪಿಸ್ತೂಲ್ ಸ್ಪರ್ಧೆಯಲ್ಲಿ ಅವರು ಬೆಳ್ಳಿ ಪದಕ ಗೆದ್ದಿದ್ದರು. ಭಾರತ, ಮೂರು ಚಿನ್ನ, ಆರು ಬೆಳ್ಳಿ ಮತ್ತು ನಾಲ್ಕು ಕಂಚು ಸೇರಿದಂತೆ ಒಟ್ಟು ೧೩ ಪದಕಗಳನ್ನು ಗೆದ್ದು, ಚೀನಾ ಮತ್ತು ಕೊರಿಯಾ ನಂತರ ಮೂರನೇ ಸ್ಥಾನದಲ್ಲಿ ತನ್ನ ವಿಶ್ವ ಚಾಂಪಿಯನ್‌ಶಿಪ್ ಅಭಿಯಾನವನ್ನು ಕೊನೆಗೊಳಿಸಿದೆ.

**<><><><>**

ಗತಿ ಶಕ್ತಿ ವಿಶ್ವವಿದ್ಯಾಲಯ ಹಾಗು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ನಿನ್ನೆ ಸ್ಥಳೀಯ ರಕ್ಷಣಾ ವ್ಯವಸ್ಥೆಗಳ ನಿಯೋಜನೆ ಅಂಶಗಳಿಗೆ ತಾಂತ್ರಿಕ ಪರಿಹಾರಗಳ ಅಭಿವೃದ್ಧಿಯನ್ನು ಸುಗಮಗೊಳಿಸಲು ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿವೆ.

**><><>** ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು **<><><**

**><><>** ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಗಂಟೆಗೆ**<><><**